ಓಪನ್ ಮೈಂಡ್‌ನಲ್ಲಿಟ್ಟುಕೊಂಡು ನೋಡಬೇಕಾಗಿದೆ. ಏಕೆಂದರೆ ಯುಜಿಸಿ ಸ್ಕೇಲ್ ಕೂಡ ನಮಗೆ ಬಹಳಷ್ಟು ಪ್ರಾಬ್ಲೆಮ್ ಉಂಟು ಮಾಡಿದೆ. 7 ನೇ ಪಂಚವಾರ್ಷಿಕ ಯೋಜನೆಯಲ್ಲಿ ಯುಜಿಸಿ ಸ್ಕೇಲ್ಸ್ ಕೊಡಬೇಕಾದಾಗ 80 ಪರ್‌ಸೆಂಟ್ ನಾವು ಕೊಡುತ್ತೇವೆ. 20 ಪರ್‌ಸೆಂಟ್ ನೀವು ಕೈಯಿಂದ ಹಾಕಿ ಎಂದು ಕೇಂದ್ರ ಸರಕಾರದವರು ಹೇಳಿದರು. ನಾವು ಕೂಡ ಒಪ್ಪಿಕೊಂಡಿದ್ದೆವು. 8ನೇ ಪಂಚವಾರ್ಷಿಕ ಯೋಜನೆಯಲ್ಲಿ 100 ಪರ್‌ಸೆಂಟ್‌ನಷ್ಟು ನೀವೇ ಹಾಕಿಕೊಳ್ಳಿ ಎಂದು ಹೇಳಿದ್ದನ್ನು ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ನಮ್ಮ ಸರಕಾರದ ಹಣವನ್ನು ನಾವು ಸರಿಯಾದ ರೀತಿಯಲ್ಲಿ ಉಪಯೋಗಿಸುವ ರೀತಿಯಲ್ಲಿ ಆಗಬೇಕು. ಇದೆಲ್ಲವನ್ನು ವಿಚಾರ ಮಾಡಿ ಪ್ರಿನ್ಸಿಪಾಲ್ ಕೇಡರ್‌ನ್ನು ತೆಗೆದುಕೊಳ್ಳಬೇಕೊ ಬೇಡವೋ ಎಂಬುದನ್ನು ಸರಕಾರ ತೀರ್ಮಾನ ಮಾಡುತ್ತದೆ ಎಂಬುದನ್ನು ಹೇಳಬಯಸುತ್ತೇನೆ.

(4) ಧಾರವಾಡದ ಸಂಪರ್ಕ ಮತ್ತು ಕಟ್ಟಡ ವಿಭಾಗದ ಮುಖ್ಯ ಇಂಜಿನೀಯರ್ ಅವರಿಂದ ಬೆಳಗಾಂ ರಸ್ತೆ ಲೋಕೋಪಯೋಗಿ ಇಲಾಖೆಗೆ ಎಲ್.ಓ.ಸಿಯನ್ನು ಬಿಡುಗಡೆ ಮಾಡುವಲ್ಲಿ ತಾರತಮ್ಯ.

ಶ್ರೀ ಎಸ್.ಎಚ್. ಕೌಜಲಗಿ:- ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಈ ಕರ್ನಾಟಕ ರಾಜ್ಯದ ನಕಾಶೆಯಲ್ಲಿ ಬರೀ ಸೌತ್ ಡಿವಿಜನ್ ಒಂದೇ ಇದೆ. ಆದರೆ ನಾರ್ತ್ ಡಿವಿಜನ್ ಇಲ್ಲ. ಮೊದಲನೆಯ ತಪ್ಪಾಗುತ್ತಿರುವುದು ತಮ್ಮ ಲೋಕೋಪಯೋಗಿಯಲ್ಲಿ ಈ ಸೌತ್ ಜೋನ್ ಮತ್ತು ನಾರ್ತ್ ಜೋನ್ ಅಂತ ಏನಿದೆ ಅದು ಇಲ್ಲ. ಆದರಲ್ಲಿ ತಮಗೆ ಒಂದೇ ಒಂದು ಉದಾಹರಣೆಯನ್ನು ಹೇಳಬೇಕು ಎಂದು ಅಂದರೆ ಯಾವ ಪ್ರಕಾರವಾಗಿ ಅನ್ಯಾಯವಾಗಿದೆ ಅಂದರೆ, ಕಳೆದ 2 ದಿವಸದ ಹಿಂದೆ ಸೌತ್ ಜೋನ್‌ಗೆ 24 ಕೋಟಿ ರೂಪಾಯಿಯನ್ನು ಕೊಟ್ಟಿದ್ದೀರಿ, ನಾರ್ತ್ ಜೋನ್‌ಗೆ 9 ಕೋಟಿ ರೂಪಾಯಿಯನ್ನು ಮೊದಲು ಕೊಟ್ಟಿದ್ದೀರಿ, ಮತ್ತೆ 3.5 ಕೋಟಿ ರೂಪಾಯಿಯನ್ನು ಕೊಟ್ಟಿದ್ದೀರಿ. ತಾವು ಸಮಾಧಾನವಾಗಿ ನಾನು ಹೇಳುವುದನ್ನು ಕೇಳಿ. ನಾನು ಏನಾದರೂ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡುತ್ತಿದ್ದಲ್ಲಿ ತಾವು ನನಗೆ ಹೇಳಿ ನೀವು ಕೊಟ್ಟಂತಹ ಮಾಹಿತಿ ಸರಿಯಿಲ್ಲ ಎಂದು ನಾನು ಕ್ಷಮೆಯನ್ನು ಕೇಳಲಿಕ್ಕೂ ಸಹಿತ ತಯಾರಿದ್ದೇನೆ. ಇಲ್ಲಿಯವರೆಗೆ ಸೌತ್ ಜೋನ್‌ಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ನಾರ್ತ್ ಜೋನ್‌ಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ತಾವು ಅದನ್ನು ನೋಡಿಕೊಳ್ಳಿ. ಇವರಡಕ್ಕೂ ಅಜಗಜಾಂತರ ಡಿಫರೆನ್ಸ್ ಇದೆ. ನಾರ್ತ್ ಜೋನ್‌ಗೆ ತಾವು ಬಿಡುಗಡೆ ಮಾಡಿದ ನಂತರ ಅಲ್ಲಿಯವರು ನಮ್ಮ ಬೆಳಗಾಂಗೆ ಏನು ಬಿಡುಗಡೆ ಮಾಡುತ್ತಾರೆ ಅದು ಅತಿ ಕಡಿಮೆ ಇದೆ, ಅದು ಏತಕ್ಕೆ ಕಡಿಮೆ ಇದೆ ಅಂದರೆ ಇವತ್ತಿನ ದಿವಸ ರಾಜ್ಯದಲ್ಲಿ ಅತಿ ಹೆಚ್ಚಿನ ವಿಸ್ತರಣೆವುಳ್ಳಂತಹ ಜಿಲ್ಲೆ ಅಂದರೆ ಬಿಜಾಪುರ, ಬೆಳಗಾಂ, ಧಾರವಾಡ್; ಈ ಜಿಲ್ಲೆಗಳಿಗೆ ತಾವು ಅನುಸರಿಸಿಕೊಂಡು ಕೊಡಬೇಕಾಗುತ್ತದೆ. ಬೀದರ್‌ಗೆ ಕೊಟ್ಟಿದ್ದಕ್ಕೆ ನನ್ನ ತರಕಾರೂ ಇಲ್ಲ, ರಾಯಚೂರಿಗೆ ಕೊಟ್ಟಿದ್ದಕ್ಕೆ ತಕರಾರು ಇಲ್ಲ, ಗುಲ್ಬರ್ಗಕ್ಕೆ ಕೊಟ್ಟಿದ್ದಕ್ಕೆ ತರಕಾರು ಇಲ್ಲ. ಆದರೆ 18 ಕ್ಷೇತ್ರ ಇದ್ದಂತಹ ಬೆಳಗಾಂ ಜಿಲ್ಲೆಗೆ ಎಷ್ಟು ಕೊಡುತ್ತೀರಿ, 5 ಕ್ಷೇತ್ರ ಇದ್ದಂತಹ ಬೀದರ್‌ಗೆ ಎಷ್ಟು ಕೊಡುತ್ತೀರಿ ಅದನ್ನು ತಾವು ಅದನ್ನು ನೋಡಬೇಕು. ಯಾವ ಪ್ರಕಾರವಾಗಿ ಬರೀ ಪೇಮೆಂಟ್ ನಡೆಯುತ್ತಿದೆ. ಅಂದರೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಧಾರವಾಡದ ಚೀಫ್ ಇಂಜಿನಿಯರ್ ಎಲ್ಲ ಇಂಜಿನಿಯರ್‌ಗಳಿಗೂ ಹೇಳಿದರು. ನೀವು ಟೆಂಟ್ ತೆಗೆದುಕೊಳ್ಳಬೇಕೆಂದು ಹೇಳಿದರು. 18 ಸಾವಿರ ರೂಪಾಯಿಯ ಟೆಂಟ್ 40 ಸಾವಿರ ರೂಪಾಯಿ ಖರ್ಚು 50 ಲಕ್ಷ ರೂಪಾಯಿ ಎಲ್.ಓ.ಸಿ ಪೇಮೆಂಟ್ ಮಾಡಿದ್ದಾರೆ. ಅವರ ಆಫೀಸ್ಸಿನಿಂದ ಪೇಮೆಂಟ್ ಮಾಡುವುದಿಲ್ಲ. ಎಕ್ಸಿಕ್ಯೂಟಿವ್ ಆಫೀಸರರ ಪೇಮೆಂಟ್ ಮಾಡಿಸುತ್ತಾರೆ. ಬೆಳಗಾಂಗೆ ಫೋನ್ ಮಾಡಿ ಹೇಳುತ್ತಾರೆ. ಈ ಪೇಮೆಂಟ್ ಮಾಡು ಅಂತ ಹೇಳುತ್ತಾರೆ.

ಅಧ್ಯಕ್ಷರು:- ತಾವು ಸ್ವಲ್ಪದರಲ್ಲಿ ಹೇಳಿ ಬಜೆಟ್ ಮೇಲೆ ಭಾಷಣವನ್ನು ಮಾಡಿದ ಹಾಗೆ ಹೇಗೆ?

ಶ್ರೀ ಎಸ್.ಹೆಚ್. ಕೌಜಲಗಿ:- ಚೀಫ್ ಇಂಜಿನಿಯರ್ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಕಾರ್ಯಕಾರಿ ಅಭಿಯಂತರರು ಅದಕ್ಕೆ ಹೊಣೆಗಾರರು ಎಂದು ಹೇಳುತ್ತಿದ್ದಾರೆ. ಅಲ್ಲಿ ಡಿವಿಯೇಶನ್ ಮಾಡಿದ್ದಕ್ಕೆ ಆ

ವಿಭಾಗದ ಕಾರ್ಯಾಕಾರಿ ಅಭಿಯಂತರರು ಹೊಣೆಗಾರರು ಎಂದು ಹೇಳುತ್ತಾರೆ. ಧಾರವಾಡ್ ಜಿಲ್ಲೆಯಲ್ಲಿ 10 ವರ್ಷ ಸಾಕಾಗುವಷ್ಟು ಪೈಪನ್ನು ಖರೀದಿ ಮಾಡಿದ್ದಾರೆ. 50 ವರ್ಷ ಬೇಕಾದಂತಹ ಟೆಂಟನ್ನು ಖರೀದಿ ಮಾಡಿದ್ದಾರೆ. ಇಂತಹದೆಲ್ಲದಕ್ಕೂ ಪೇಮೆಂಟ್ ಮಾಡಿದರೆ ನಮ್ಮ ಪೆಂಡಿಂಗ್ ಬಿಲ್ ಹೇಗೆ ಉಳಿಯುತ್ತದೆ. ನಮ್ಮ ರಸ್ತೆಯ ಗತಿ ಏನು? ನಮ್ಮ ಬೆಳಗಾಂ ಜಿಲ್ಲೆಗೆ 1992-93ನೇ ಸಾಲಿನಲ್ಲಿ 32 ಕೋಟಿ ರೂಪಾಯಿಗಳನ್ನು ಟ್ಯಾಕ್ಸ್ ಕೊಟ್ಟಿದ್ದೇವೆ. ನಮ್ಮಲ್ಲಿ 7 ಸಕ್ಕರೆ ಕಾರ್ಖಾನೆಗಳು ಇವೆ, 7 ಸಕ್ಕರೆ ಕಾರ್ಖಾನೆಯಿಂದ 32 ಕೋಟಿರೂಪಾಯಿಯನ್ನು ನಿಮಗೆ ಟ್ಯಾಕ್ಸ್ ಮುಖಾಂತರ ಕೊಟ್ಟಿದ್ದೇವೆ. ಡಿಸ್ಟಲರೀಸ್‌ನಿಂದ 9 ಕೋಟಿ ರೂಪಾಯಿಯನ್ನು ಕೊಟ್ಟಿದ್ದೇವೆ. ಡಿಸ್ಟಲರೀಸ್ ಬಿಟ್ಟು 32 ಕೋಟಿ ರೂಪಾಯಿ, ಡಿಸ್ಟಲರಿಯನ್ನು ಸೇರಿಸಿಕೊಂಡು 41 ಕೋಟಿ ರೂಪಾಯಿಯನ್ನು ನಿಮ್ಮ ಸರ್ಕಾರಕ್ಕೆ ತುಂಬಿದ್ದೇವೆ. ಹೀಗೆ ನಾವು ತುಂಬಿದಾಗ ನಮಗೆ ನೀವು ಕೊಟ್ಟಿದ್ದುದು ಎಷ್ಟು ಅಂದರೆ 696 ಲಕ್ಷ ರೂಪಾಯಿ ಅಂದರೆ 6 ಕೋಟಿ ರೂಪಾಯಿಯನ್ನು ಕೊಟ್ಟಿದ್ದೀರಿ. ಇವತ್ತಿನವರೆಗೂ ಎಷ್ಟು ಬಿಲ್ಸ್ ಪೆಂಡಿಂಗ್ ಇವೆ, ಪೆಂಡಿಂಗ್ ಬಿಲ್ ಎಷ್ಟನ್ನು ಕೊಡುತ್ತೀರಿ, ಸಾಮಾಗ್ರಿದು ಎಷ್ಟು ಪೆಂಡಿಂಗ್ ಇದೆ. 1992 93ನೇ ಸಾಲಿನಲ್ಲಿ ನಮ್ಮ ಜಿಲ್ಲೆಗೆ ಅಯವ್ಯಯ ಪಟ್ಟಿಯಲ್ಲಿ ಎಷ್ಟು ಹಣವನ್ನು ಒದಗಿಸಿದ್ದೀರಿ ಅಷ್ಟು ಹಣವನ್ನು ಕೊಟ್ಟುಬಿಡಿ, ನಮಗೆ ನೀವು ಹೆಚ್ಚಿಗೆ ಏನು ಉಪಕಾರವನ್ನು ಮಾಡುವುದು ಬೇಡಿ. ಆಯವ್ಯಯ ಪಟ್ಟಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಯಾವ್ಯಾವ ಬಾಬಿಗೆ ಎಷ್ಟೆಷ್ಟು ಒದಗಿಸಿದ್ದೀರಿ ಅಷ್ಟನ್ನು ಒದಗಿಸಿದ್ದರೆ ಸಾಕು; ನಾವು ಏನಾದರೂ ಮಾಡಿಕೊಳ್ಳುತ್ತೇನೆ. ಎಲ್.ಓ.ಸಿ.ಯನ್ನು ಕೊಡುವುದಿಲ್ಲ. ಎಲ್.ಓ.ಸಿಯನ್ನು ತರಬೇಕಾದರೆ ಏನಾಗುತ್ತದೆಂದು ದೇವರಿಗೆ ಗೊತ್ತು. ಹಾಗಾಗಿ ಒಂದು ರಸ್ತೆಯು ಸರಿ ಇಲ್ಲ. ನಮ್ಮ ಪರಿಸ್ಥಿತಿ ಏನು ಎಂದು ನಿಮಗೆ ಗೊತ್ತಿಲ್ಲ. 1200 ರೂಪಾಯಿ ಸಂಬಳದಲ್ಲಿ ಆ ಗಾಡಿಯನ್ನು ಹೇಗೆ ಓಡಿಸಬೇಕೆಂದು ನಮಗೆ ಗೊತ್ತು. ಮಾನ್ಯ ರಂಗನಾಥರವರು ಬಂದ ನಂತರ ಈ ಲೋಕೋಪಯೋಗಿ ಇಲಾಖೆ ಸುಧಾರಿಸುತ್ತದೆಂದು ನಮಗೆ ಆಸೆ ಆಶ್ವಾಸನೆಗಳು ನಮಗೆ ಇದೆ. ನನಗೆ ಆತ್ಮ ವಿಶ್ವಾಸ ಇದೆ. ಆದರೆ ಅದನ್ನು ಸ್ವಲ್ಪ ಸುಧಾರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ತಮಗೆ ಬಹಳ ಮಹತ್ವದ ಖಾತೆ ಇರಬೇಕು, ಆದರೆ ನಮಗೆ ಇದು ಬಹಳ ಪ್ರಮುಖವಾದ ಖಾತೆಯಾಗಿದೆ. ಬರೇ ಪರ್ಚೇಸ್ ಮಾಡಬೇಕು, ಸಿಮೆಂಟ್ ಬೇಕು, ಸ್ಟೀಲ್ ಬೇಕು, ಅಂದರೆ ಪರ್ಚೇಸ್ ಮಾಡಿಕೊಳ್ಳಬೇಕು. ಎಲ್ಲಾ ಇರುವುದು ರಾಯಚೂರು ಬಳ್ಳಾರಿ, ಮತ್ತು ಬೀದರ್ ಮೂರು ಜಿಲ್ಲೆಯಲ್ಲಿದೆ. ಅಲ್ಲಿ ಏನು ಎಲ್.ಓ.ಸಿ. ಪೇಮೆಂಟ್ ಆಗುತ್ತದೆ ಅದು ಸರಿಯಾಗಿ ಉಪಯೋಗವಾಗುವುದಿಲ್ಲ. ತಾವು ಬೇಕಾದರೆ ಸಮಾಧಾನದಿಂದ ಇನ್‌ಪೆಕ್ಷನ್ ಮಾಡಿ. ನೀವು ಒಂದು ಸಾರಿ ನಮ್ಮ ಭಾಗದ ರೋಡಿಗೆ ಭೇಟಿ ಕೊಡಿ, ಆಗ ನೀವು ಹೇಳಿದ್ದುದು ಸರಿ ಇದೆ. ಅದು ಸರಿಯಾಗಿಲ್ಲ ಅಂತ ಹೇಳುತ್ತೀರಿ. ಬರೀ ಪೈಪು, 50 ಲಕ್ಷ ರೂಪಾಯಿಯ ಪೇಮೆಂಟ್ ಮಾಡಿದ್ದಾರೆ ಲೆಕ್ಕ ಹಾಕಿ. ಬೆಳಗಾಂ ಜಿಲ್ಲೆಗೆ ಈಗ ಅನ್ಯಾಯವಾಗಿದೆ. ಅದನ್ನು ಸರಿಪಡಿಸಿ 1993-94ನೇ ಸಾಲಿನಲ್ಲಿ ಕೊಡಬೇಕು. ನಮ್ಮಲ್ಲಿ 7 ಸಕ್ಕರೆ ಕಾರ್ಖಾನೆಗಳು ಇವೆ. ರಸ್ತೆಗಳೆಲ್ಲ ಕೆಟ್ಟು ಹೋಗಿದೆ. ಆಸ್ಪತ್ರೆಯ ಬಿಲ್ಡಿಂಗ್ ಸರಿಯಾಗಿಲ್ಲ. ಸಮಾಜ ಕಲ್ಯಾಣ ಇಲಾಖೆಯ ಹಣವನ್ನು ಲ್ಯಾಪ್ಸ್ ಮಾಡುತ್ತೀರಿ ಅಡ್ಮಿನಿಸ್ಟ್ರೇಶನ್ ಅಪ್ರೂವಲ್ ಕೊಟ್ಟರೆ ಟೆಕ್ನಿಕಲ್ ಅಪ್ರೂವಲ್ ಕೊಡಲಿಕ್ಕೆ ತಯಾರಿಲ್ಲ. ಟೆಕ್ನಿಕಲ್ ಅಪ್ರೂವಲ್ ಕೊಟ್ಟ ನಂತರ ಡಿ.ಟಿ. ಮಾಡುವುದಕ್ಕೆ ತಯಾರಿಲ್ಲ. ಅದಕ್ಕೆ 30 ಪರ್ಸೆಂಟ್ ಇಲ್ಲ ಅನ್ನುತ್ತಾರೆ. 30 ಪರ್ಸೆಂಟ್ ಕೊಟ್ಟು ಕೂಡಲೆ ಶುರು ಮಾಡುವುದಕ್ಕೆ ತಯಾರಾಗಿಲ್ಲ ಅಂತ ಅನ್ನುತ್ತಾರೆ. ಆದ ಕಾರಣ ಇವತ್ತಿನ ದಿವಸ ಬಹಳ ಅನ್ಯಾಯ ಧಾರವಾಡದ ಮುಖ್ಯ ಚೀಫ್ ಇಂಜಿನಿಯರ್ ಆಫೀಸ್‌ನಲ್ಲಿ ನಡೆದಿದೆ. ಅದರ ಬಗ್ಗೆ ತಾವು ಪರಿಶೀಲನೆ ಮಾಡಬೇಕು. ತಾವು ರಿವ್ಯೂ ಮಾಡಿ, ನಾವು ರಿವ್ಯೂ ಮಾಡಿದ ನಂತರ ಅದು ಸರಿ ಇದ್ದರೆ ಒಪ್ಪಿರಿ, ಇಲ್ಲದಿದ್ದರೆ ಇಲ್ಲ ಅಂತ ಹೇಳಿ, ನೀವು ಹೇಳಿದ್ದನ್ನು ನಾನು ರಿವ್ಯೂ ಮಾಡಿದ್ದೇನೆ. ತಪ್ಪು ಆಯಿತು. ಅದನ್ನು ಹೇಳಿ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್:- ಮಾನ್ಯ ಲೋಕೋಪಯೋಗಿ ಮಂತ್ರಿಯವರು ಅವರ ಉತ್ತರದಲ್ಲಿ ಡಿವಿಯೇಶನ್ ಆಗಿದೆ ಎಂದು ಹೇಳಿದ್ದಾರೆ. ಯಾವ್ಯಾವ ಶೀರ್ಷಿಕೆಗೆ ಎಷ್ಟೆಷ್ಟು ಡಿವಿಯೇಶನ್

ಆಗಿದೆ. ಆ ಡಿವಿಯೇಶನ್ ಮಾಡಲಿಕ್ಕೆ ಕಾರ್ಯಪಾಲಕ ಅಭಿಯಂತರರು ಯಾರು ಸಂಬಂಧಪಟ್ಟಿದ್ದಾರೆ ಅವರು ಮಾಡಿದ್ದಾರೋ ಅಥವಾ ಡೈರಕ್ಟಾಗಿ ಮುಖ್ಯ ಅಭಿ2ಯಂತರರು ಮಾಡಿದ್ದಾರೋ ಎನ್ನತಕ್ಕ ವಿಷಯವನ್ನು ಇಲ್ಲಿ ಪರಿಶೀಲನೆ ಮಾಡಬೇಕಾಗುತ್ತದೆ.

ಶೀರ್ಷಿಕೆಗೆ ಕೊಟ್ಟಂತಹ ಡೀವಿಯೇಷನ್ ಆಗಬೇಕಾದರೆ ಯಾರಾದರೂ ಆದೇಶವಿಲ್ಲದೆ ಡೀವಿಯೇಟ್ ಮಾಡುವುದಕ್ಕೆ ಆಗುವುದಿಲ್ಲ. ಈಗಾಗಲೇ ತಾವು ಹೇಳಿದ ಪ್ರಕಾರ ಲೇಟೆಸ್ಟ್ ಆಗಿ ಒಂದು ವರದಿಯನ್ನು ಕೊಟ್ಟಿದ್ದೀರಿ. ದಿನಾಂಕ 31-3-93ರ ಒಳಗೆ ಸುಮಾರು 47 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇದರಲ್ಲಿ ಪ್ರತಿ ತಿಂಗಳು ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ. ಬಿಡುಗಡೆ ಮಾಡಿದಂತಹ ಹಣವನ್ನು ಈ ಶೀರ್ಷಿಕೆಗೆ ಖರ್ಚು ಮಾಡಲಾಗಿದೆಯೆ, ಬೇರೆ ಶೀರ್ಷಿಕೆಗೆ ಖರ್ಚು ಆಗಿದೆಯೇ, ನಮ್ಮಲ್ಲಿ ಏನಾಗಿದೆ ಎಂದರೆ ಗಡಿ ಭಾಗದಲ್ಲಿರುವುದರಿಂದ ಗಡಿ ಅಭಿವೃದ್ಧಿ ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಾವೆಲ್ಲರೂ ಒತ್ತಾಯ ಮಾಡಿದ್ದೇವೆ. ನಾವು ಒತ್ತಾಯ ಮಾಡಿದ ಜಿಲ್ಲೆಯ ಕೆಲವೊಂದು ಜಾಗಗಳಲ್ಲಿ ಗಡಿ ಅಭಿವೃದ್ಧಿ ಕೆಲಸ ಜಲ್ಲಿ ಕಲೆಕ್ಷನ್ ಮಾಡುತ್ತಾ ಇನ್ನು ಉಳಿದ ಮೆಟೀರಿಯಲ್ ಖರೀದಿ ಮಾಡುವುದನ್ನು ಮಾಡಿರಬಹುದು. ಆದರೆ ಖರೀದಿ ಮಾಡಿದಂತಹ ಮೆಟೀರಿಯಲ್‌ನ್ನು ನಿಜವಾಗಲೂ ರಸ್ತೆಯ ಮೇಲೆ ಹಾಕದೆ ಹೋದರೆ ಬಹಳ ತೊಂದರೆಯಾಗುತ್ತದೆ. ಆ ದೃಷ್ಟಿಯಿಂದ ವಿಶೇಷವಾದಂತಹ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ನಮ್ಮ ಶೀರ್ಷಿಕೆ ಬಿಟ್ಟು ಬೇರೆ ಕಡೆ ಡೀವಿಯೇಷನ್ ಮಾಡಲು ಹೇಳಿದ್ದೀರಿ. ಯಾವ ಯಾವ ಶೀರ್ಷಿಕೆಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ, ಅದು ಏಕೆ ಡೀವಿಯೇಷನ್ ಆಯಿತು ಎನ್ನುವ ಕಾರಣವನ್ನು ಹೇಳಬೇಕು. ಈಗಾಗಲೇ ಮುಖ್ಯ ಅಭಿಯಂತರರು ಯಾರು ಇದ್ದಾರೆ ಅವರೊಡನೆ ವಿಷಯ ಚರ್ಚೆಯಾಗಿದೆಯೇ ಇಲ್ಲ, ಅಲ್ಲಿಂದ ಡೈರಕ್ಟಾಗಿ ಪ್ರತಿಯೊಂದು ಕಾರ್ಯಪಾಲಕ ಅಭಿಯಂತರರಿಗೂ ಆದೇಶ ಕೊಡುತ್ತಿದ್ದಾರೋ ಅಂತೂ ಮೆಟೀರಿಯಲ್ಸ್ ಖರೀದಿ ಮಾಡುತ್ತಾರೆ. ಅವರಿಗೆ ಯಾವ ತರಹ ಎಲ್.ಓ.ಸಿ ಆದೇಶ ಕೊಡುತ್ತಾರೋ ಅದು ಚರ್ಚೆಯ ವಿಷಯವಾಗಿದೆ. ಈ ರೀತಿ ಚರ್ಚಾ ವಿಷಯವಾಗಬಾರದು. ಆದುದರಿಂದ ತಾವು ಗಡಿ ಭಾಗದಲ್ಲಿರುವಂತಹ ಬೆಳಗಾಂ ಜಿಲ್ಲೆ, ರಾಯಚೂರು, ಗುಲ್ಬರ್ಗಾ, ಅದರ ಕಡೆಗೆ ವಿಶೇಷವಾದಂತಹ ಗಮನ ಕೊಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ. ಯಾರೇ ತಪ್ಪು ಮಾಡಿರಲಿ, ಎಷ್ಟೇ ದೊಡ್ಡವರು ಇರಲಿ, ಅವರ ಮೇಲೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಯೋಗ್ಯವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತಾರೆಂಬ ವಿಶ್ವಾಸ ನನಗೆ ಇದೆ. ಇಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ, ಯಾರು ಒಳ್ಳೆಯ ಕೆಲಸವನ್ನು ಮಾಡುತ್ತಾರೆ ಅವರ ಮೇಲೆ ಲೋಪದೋಷಗಳು ಇದ್ದರೂ ಕೂಡ ಅವರನ್ನು ಉಳಿಯುವಂತಹ ಕಾರ್ಯವನ್ನು ಕೂಡ ಮಾಡಬೇಕಾಗುತ್ತದೆ. ಅಷ್ಟೇ ಅಲ್ಲ ಈಗ ಕಿತ್ತೂರಿನಲ್ಲಿ ಅಭಿವೃದ್ಧಿ ಕಾರ್ಯಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. ತಾವು ಒಂದು ಸಲ ಅಲ್ಲಿಗೆ ವಿಜಿಟ್ ಮಾಡಬೇಕೆಂದು ತಮ್ಮನ್ನು ವಿನಂತಿಸುತ್ತೇನೆ. ಡೀವಿಯೇಷನ್ ಆದಂಥಾದ್ದಕ್ಕೆ ವಿವರವನ್ನು ಮಾನ್ಯ ಮಂತ್ರಿಗಳು ಸದನದಲ್ಲಿ ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ :-(ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಕೌಜಲಗಿಯವರು ಒಂದು ಅಪವಾದವನ್ನು ಮಾಡುತ್ತಿದ್ದಾರೆ. ದಕ್ಷಿಣದ ಭಾಗಕ್ಕೆ ಹೆಚ್ಚು ಹಣವನ್ನು ವಿಚ್ರ್ಯು ಮಾಡಲಾಗುತ್ತದೆ ಉತ್ತರದ ಭಾಗಕ್ಕೆ ವಿಚ್ರ್ಯಾಗುವುದಿಲ್ಲ ಎಂದು ಹೇಳಿದ್ದಾರೆ. ಇದರಲ್ಲಿ ದಕ್ಷಿಣ, ಉತ್ತರ ಜನಸಂಖ್ಯೆ, ತಾಲ್ಲೂಕುಗಳು ಜಾಸ್ತಿ ಇದನ್ನು ನೋಡಿ ಹಣವನ್ನು ಅಲಾಟ್ ಮಾಡುವುದಿಲ್ಲ. ಕೆಲಸಗಳು ಏನು ತೆಗೆದುಕೊಂಡಿದ್ದಾರೆ ಅದಕ್ಕೆ ಎಷ್ಟು ಬೇಕು ಎನ್ನುವ ದೃಷ್ಟಿಯಿಂದ ಮಾಡುತ್ತೇವೆ. ಆದ್ದರಿಂದ ತಮಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ ಈ ರಾಜ್ಯ ದೊಡ್ಡದಾಗಬೇಕು, ವಿಕೇಕರಣವಾಗಬೇಕು, ಎನ್ನುವವರ ಪೈಕಿ ನಾನೂ ಒಬ್ಬನು. ಅದಕ್ಕೆ ನಾನು ಒಂದು ಸಣ್ಣ ಸೇವೆಯನ್ನು ಸಲ್ಲಿಸುತ್ತೇನೆ. ಹಾಗಾಗಿ ರಾಜ್ಯದ ಎಲ್ಲಾ ಭಾಗದ ರಸ್ತೆಗಳು ಅಭಿವೃದ್ಧಿಯಾಗಬೇಕಾದರೆ ರಾಜ್ಯ ಅಭಿವೃದ್ಧಿಯಾಗಬೇಕು ಎಂಬುದು

ಅಭಿವೃದ್ಧಿಯ ಒಂದು ಸಿದ್ಧಾಂತ ಇದೆ. ಕಾರಣಾಂತರದಿಂದ ಏನಾದರೂ ಆಗಿರಬಹುದು. ಈಗ ಹಣ ಇಡುವುದರಲ್ಲಿ, ಮಾಡುವುದರಲ್ಲಿ ನಾನು ತಮಗೆ ಮಾಹಿತಿ ಒದಗಿಸಿದ್ದೇನೆ. ಎಲ್ಲಾ ವಿಚಾರಗಳನ್ನು ತಾವು ಅನುಬಂಧದಲ್ಲಿ ನೋಡಬಹುದು. ಉತ್ತರ ವಲಯದಲ್ಲಿ ಗದಗ್‌ಗೆ ಎಷ್ಟಾಗಿದೆ, ಕಾರವಾರಕ್ಕೆ ಎಷ್ಟಾಗಿದೆ, ಬಿಜಾಪುರ, ಬೆಳಗಾಂ, ಗುಲ್ಬರ್ಗಾ ಇವುಗಳಲೆಲ್ಲಾ ಎಷ್ಟಾಗಿದೆ ಅವೆಲ್ಲವನ್ನು ತಾವು ನೋಡಿದರೆ ಬೆಳಗಾಂ ಜಿಲ್ಲೆಗೆ ಅನ್ಯಾಯವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. 1992-93ನೇ ಸಾಲಿನಲ್ಲಿ ಬೆಳಗಾಂ ಜಿಲ್ಲೆಗೆ ಗ್ರಾಂಟ್ 655 ಲಕ್ಷ ರೂಪಾಯಿಗಳು, ಆದರೆ 696 ಲಕ್ಷ ರೂಪಾಯಿಗಳು ಕೊಟ್ಟಿರುವುದು. 31-3-93ರ ವರೆಗೆ ಕೊಟ್ಟಿರುವುದನ್ನು ಹೇಳಿದ್ದೇನೆ. ನಾನು ಒದಗಿಸಿರುವುದರಲ್ಲಿ ತಾವು ನೋಡಿದರೆ ಹಣ ಗೊತ್ತಾಗುತ್ತದೆ. ಆದರೆ ತಾವು ಏನು ಪ್ರಸ್ತಾಪಿಸಿದ್ದೀರಿ ಕೆಲಸ ಆಗಬೇಕು, ರಸ್ತೆ ಆಗಬೇಕು, ರಸ್ತೆಗಳು ಚೆನ್ನಾಗಿ ಆಗಬೇಕು ಎನ್ನತಕ್ಕಂಥದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ. ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ಹೇಗೆ ದುರುಪಯೋಗ ಮಾಡುತ್ತಿದ್ದಾರೆ, ಹೇಗೆ ತಪ್ಪು ಮಾಡುತ್ತಿದ್ದಾರೆ, ಎನ್ನುವುದನ್ನು ಮಾನ್ಯ ಸದಸ್ಯರ ಕಾಲಿಂಗ್ ಅಟೆನ್‌ಷನ್ ಬಹಳ ಸೀಮಿತವಾಗಿರುತ್ತದೆ. ಎಲ್.ಒ.ಸಿ.ಗೆ ಸೀಮಿತವಾಗಿರುವುದರಿಂದ ಸಂಬಂಧಪಟ್ಟಂತಹ ಉತ್ತರವನ್ನು ತೆಗೆದು ಸಭೆಯ ಮುಂದೆ ಇಟ್ಟಿದ್ದಾರೆ. ಅಲ್ಲಿ ಏನು ಅಪರಾಧ ಮಾಡುತ್ತಾರೆ ಅದನ್ನು ಮಾನ್ಯ ಸದಸ್ಯರು ಹೇಳಿದರೆ ಅದನ್ನು ಕೂಡ ತರಿಸಿ ಕೊಡುವುದಕ್ಕೆ ಸಾಧ್ಯವಾಗುತ್ತಿತ್ತು. ತಪ್ಪು ಯಾರೇ ಮಾಡಿರಲಿ ಅವರಿಗೆ ಶಿಕ್ಷೆ ಆಗುತ್ತದೆ. ಮಾನ್ಯ ಮಲ್ಕಾರಿಗೌಡ ಪಾಟೀಲರು ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದರು. ಅದು ಯಾವ್ಯಾವ ಶೀರ್ಷಿಕೆಯಲ್ಲಿ ಎಷ್ಟೆಷ್ಟು ಖರ್ಚಾಗಿದೆ ಎಂದು. ಅದನ್ನು ಕೂಡ ಅನುಬಂಧದಲ್ಲಿ ಕೊಟ್ಟಿದ್ದೇವೆ. ಅದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಾದರೆ ಈಗ ಶೀರ್ಷಿಕೆ-30: 54 ರಸ್ತೆ ಮತ್ತು ಸೇತುವೆ. ಆದರಲ್ಲಿ 1992-93ಕ್ಕೆ ಗ್ರಾಂಟ್ ಆಗಿರುವುದು 318 ಕೋಟಿ ರೂಪಾಯಿ. ಫೆಬ್ರವರಿ 28ಕ್ಕೆ ಬಿಡುಗಡೆ ಆಗಿರುವುದು 2,03,82,000 ರೂಪಾಯಿ. ಮುಂದೆ 28-2-93ರವರಗೆ ಮಾಡಿರುವ ವೆಚ್ಚ 3,85,00,000 ರೂಪಾಯಿ, ಇದು ಇಲ್ಲೇ ತಪ್ಪಾಗಿರುವುದು. ಇದಕ್ಕೆ ನಾನು ಡೀವಿಯೇಷನ್ ಎಂದು ಹೇಳುವುದು. ಅವರಿಗೆ ಕೊಟ್ಟಿರುವಂತಹ ಹಣ ಎಂದರೆ ಬಿಡುಗಡೆಯಾಗಿರತಕ್ಕ, 202ಕೋಟಿ 3 ಲಕ್ಷ ರೂಪಾಯಿ, ಆದರೆ ಖರ್ಚು ಮಾಡಿರತಕ್ಕಂಥಾದ್ದು 3ಕೋಟಿ 85 ಲಕ್ಷ ರೂಪಾಯಿ ಇಲ್ಲಿ ಏನೋ ಆಗಿದೆ; ಇದೆಲ್ಲಾ ನಾನು ನೋಡಿದ್ದೇನೆ. ಹಾಗಯೇ ಇದು ಯೋಜನೇತರ ಎಂದರೆ ನಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಜಾಸ್ತಿ ಮಾಡಿದ್ದಾರೆ. ಅದೇ ರೀತಿ ಶೀರ್ಷಿಕೆ 50:54 ಡಾಂಬರ್‌ಗೆ-10 ಲಕ್ಷ ರೂಪಾಯಿ ಗ್ರಾಂಟ್ ಆಗಿದೆ. 14 ಲಕ್ಷ ರೂಪಾಯಿ ಬಿಡುಗಡೆ ಆಗಿದ್ದರೆ ಖರ್ಚಾಗಿರುವುದು 10 ಲಕ್ಷ ರೂಪಾಯಿ. ತಮಗೆ ಪಟ್ಟಿಯನ್ನು ಒದಗಿಸಿದ್ದೇ ', ತಾವು ಆದನ್ನು ನೋಡಬಹುದು. ಅದು ತಮ್ಮ ಪಟ್ಟಿಯಲ್ಲಿ ಇದೆ. ಮತ್ತು ಫಾರ್ಮೆಷನ್ 30:54-ಶೀರ್ಷಿಕೆ ಅದಕ್ಕೆ 45 ಲಕ್ಷ ರೂಪಾಯಿ ಇಟ್ಟಿರತಕ್ಕಂಥಾದ್ದು, ಬಿಡುಗಡೆ ಆಗಿರುವುದು 33 ಲಕ್ಷ ರೂಪಾಯಿ 13 ಲಕ್ಷ ರೂಪಾಯಿ ಖರ್ಚಾಗಿರುವುದು. ಇನ್ನು ಸೇತುವೆಗೆ ಎಂದು ಇಟ್ಟಿರುವುದು 7 ಲಕ್ಷ ರೂಪಾಯಿ ಅದಕ್ಕೆ ಬಿಡುಗಡೆ ಆಗಿರುವುದು ಎಂದರೆ ಎಲ್.ಒ.ಸಿ.ಕೊಟ್ಟಿರುವುದು 21 ಲಕ್ಷ ರೂಪಾಯಿ, ಇದರಲ್ಲಿ, ಖರ್ಚಾಗಿರತಕ್ಕಂಥಾದ್ದು 19 ಲಕ್ಷ ರೂಪಾಯಿ. ಹೀಗಾಗಿ ಡೀವಿಯೇಷನ್ ಮಾಡಿ ಸುಮಾರು ಮೊದಲಿನ ಒಂದು ಐಟಂ ನಾನು ಏನು ಹೇಳಿದೆ 30:54 ಅಲ್ಲಿ ಸುಮಾರು 1 ಕೋಟಿ ರೂಪಾಯಿ ಹೆಚ್ಚು ಹಣ ಖರ್ಚಾಗಿದೆ. ಹೀಗೆ ಡೀವಿಯೇಷನ್‌ನನ್ನು ಡೈವರ್ಸಿಟಿ ಆಫ್ ಫಂಡ್ಸ್ ಮಾಡಿದ್ದೇವೆ. ಮತ್ತು ಕಟ್ಟಡಗಳು, ಇದರಲ್ಲಿ ಇಟ್ಟಿರುವುದು 63 ಲಕ್ಷ ರೂಪಾಯಿ, ಬಿಡುಗಡೆ ಆಗಿರುವುದು 34 ಲಕ್ಷ ರೂಪಾಯಿ ಖರ್ಚಾಗಿರುವುದು 89 ಲಕ್ಷ ರೂಪಾಯಿ. ಇನ್ನು 22:26 ಹೆಡ್ ಆಫ್ ಅಕೌಂಟ್, ಯೋಜನೇತರ ಎಂದರೆ ಇದು ಎರಡು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್. ಇದಕ್ಕೆ 17 ಲಕ್ಷ ರೂಪಾಯಿ ಇಟ್ಟಿರುವುದು, ಬಿಡುಗಡೆ ಆಗಿರುವುದು 9 ಲಕ್ಷ ರೂಪಾಯಿ, ಇದಕ್ಕೆ ಖರ್ಚಾಗಿರತಕ್ಕಂಥಾದ್ದು 26 ಲಕ್ಷ ರೂಪಾಯಿ. ಮತ್ತು ಪಬ್ಲಿಕ್ ವರ್ಕ್ಸ್‌ಗೆ ಇಟ್ಟಿರುವುದು 127 ಲಕ್ಷ ರೂಪಾಯಿ, ಬಿಡುಗಡೆ ಆಗಿರುವುದು 32 ಲಕ್ಷ ರೂಪಾಯಿ, ಆದರೆ ಖರ್ಚಾಗಿರುವುದು 29 ಲಕ್ಷ ರೂಪಾಯಿ. ವಸತಿಗಳು ಇದಕ್ಕೆ ಇಟ್ಟಿರುವುದು 8 ಲಕ್ಷ ರೂಪಾಯಿ, ಬಿಡುಗಡೆ

ಆಗಿರುವುದು ಎಂದರೆ ಎಲ್.ಓ.ಸಿ ಕೊಟ್ಟಿರುವುದು 14 ಲಕ್ಷ ರೂಪಾಯಿ ಖರ್ಚಾಗಿರುವುದು 87 ಸಾವಿರ ರೂಪಾಯಿ. ಇನ್ನು ಶಿಕ್ಷಣದ ಶೀರ್ಷಿಕೆಯಲ್ಲಿ 33 ಲಕ್ಷದ 66 ಸಾವಿರ ರೂಪಾಯಿ ಇಟ್ಟಿರುವುದು, ಎಲ್.ಓಸಿ, ಕೊಟ್ಟಿರುವುದು 14 ಲಕ್ಷ ರೂಪಾಯಿ ಆದರೆ ಖರ್ಚಾಗಿರತಕ್ಕಂಥಾದ್ದು 13 ಲಕ್ಷದ 28 ಸಾವಿರ ರೂಪಾಯಿ. ಇನ್ನು ವೈದ್ಯಕೀಯಕ್ಕೆ ಇಟ್ಟಿರುವುದು 7 ಲಕ್ಷ ರೂಪಾಯಿ, ಎಲ್ಓಸಿ ಕೊಟ್ಟಿರತಕ್ಕಂಥಾದ್ದು 12 ಲಕ್ಷ ರೂಪಾಯಿ, ಖರ್ಚು ಮಾಡಿರುವುದು 75 ಸಾವಿರ ರೂಪಾಯಿ. ಹಾಗೆ ಶೀರ್ಷಿಕೆ 42:35 ಎಸ್ಎಸ್ ಟ್ಯಂಡ್ ಡಬ್ಲ್ಯೂಗೆ ಇಟ್ಟಿರುವುದು 1.90 ಲಕ್ಷ ರೂಪಾಯಿ. ಅದಕ್ಕೆ ಬಿಡುಗಡೆ ಆಗಿರುವುದು 7 ಲಕ್ಷ ರೂಪಾಯಿ, ಖರ್ಚಾಗಿರುವುದು 4 ಲಕ್ಷ ರೂಪಾಯಿ. ಮತ್ತು ಕುಟುಂಬ ಯೋಜನೆಗೆ ಇಟ್ಟಿರುವುದು 2 ಲಕ್ಷ ರೂಪಾಯಿ, ಬಿಡುಗಡೆ ಆಗಿರುವುದು 1 ಲಕ್ಷದ 70 ಸಾವಿರ ರೂಪಾಯಿ ಖರ್ಚಾಗಿರುವುದು ನಿಲ್. ಶೀರ್ಷಿಕೆ 40:59-ನವೀಕರಣ ಇದಕ್ಕೆ ಇಟ್ಟಿರುವುದು 15 ಲಕ್ಷ ರೂಪಾಯಿ, ಬಿಡುಗಡೆ ಆಗಿರುವುದು 7 ಲಕ್ಷದ 50 ಸಾವಿರ ರೂಪಾಯಿ, ಖರ್ಚಾಗಿರುವುದು 58 ಸಾವಿರ ರೂಪಾಯಿ. ವಸತಿ ನವೀಕರಣ ಶೀರ್ಷಿಕೆ 42:16 ಇದಕ್ಕೆ ಇಟ್ಟಿರುವುದು 10 ಲಕ್ಷ ರೂಪಾಯಿ, ಬಿಡುಗಡೆ ಆಗಿರುವುದು 45 ಲಕ್ಷ ರೂಪಾಯಿ, ಖರ್ಚಾಗಿರುವುದು ನಿಲ್. ಮತ್ತು ಪ್ರವಾಸೋದ್ಯಮಕ್ಕೆ ಇಟ್ಟಿರುವುದು 2 ಲಕ್ಷ ರೂಪಾಯಿ, (1.95) ಖರ್ಚಾಗಿರತಕ್ಕಂಥಾದ್ದು 11 ಸಾವಿರ ರೂಪಾಯಿ. ಹೀಗೆ ಡೀವಿಯೇಷನ್ ಆಫ್ ಫಂಡ್ಸ್ ಇದೆ. ಅದರಿಂದ ಮೇಲುನೋಟಕ್ಕೆ ಏನೋ ಹೇಳುತ್ತಿರಬಹುದು, ಇಲ್ಲ ಸ್ವಾಮಿ ದುಡ್ಡು ಆಗಿಲ್ಲ ಹಾಗೆ ಹೀಗೆ ಎಂದು. ಬಟ್ ದಟ್ ಇಜ್ ನಾಟ್ ದ ಫಾಕ್ಟ್. ಅದಕ್ಕೆ ನಾನು ಹೇಳಿದ್ದು. ಇನ್ನು 92-93ಕ್ಕೆ ಪಿಡಬ್ಲ್ಯೂಡಿಗೆ ಗ್ಯಾಂಟ್ 6 ಕೋಟಿ 55 ಲಕ್ಷ ಇದ್ದರೆ, ಎಲ್ಓಸಿ ಕೊಟ್ಟಿರುವುದು 6 ಕೋಟಿ 96 ಲಕ್ಷ ರೂಪಾಯಿ. This is upto the end of March. ಆದ್ದರಿಂದ ಆ ಆಪಾದನೆ ಹಣ ಇದ್ದು ಖರ್ಚು ಮಾಡದೆ ಇರಬಾರದು ಎಂದು ಅಲ್ಲ. ಮತ್ತು ಮಾನ್ಯ ಸದಸ್ಯರು ನಮ್ಮದು ದೊಡ್ಡ ಡಿಸ್ಟ್ರಿಕ್ಟ್ ಎಂದು ಹೇಳಿದ್ದಾರೆ. ಡಿಸ್ಟ್ರಿಕ್ಟ್ ದೊಡ್ಡದು, ಆದರೆ ಬಹುಮಟ್ಟಿಗೆ ಅದನ್ನು ತೆಗೆದುಕೊಳ್ಳುವಾಗ ಹೆಚ್ಚು ಕಲಸ ತೆಗೆದುಕೊಳ್ಳದೆ ಇರಬಹುದು ಎಂದು ಕಾಣುತ್ತದೆ. ಅದರಲ್ಲಿ ಏನು ತಪ್ಪಾಗುತ್ತದೆ ಅದನ್ನು ನೋಡಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆಂದು ಹೇಳುತ್ತಾ ಮತ್ತೆ ಮಾನ್ಯ ಸದಸ್ಯರು ಬೇರೆ ಒಂದು ವಿಷಯವನ್ನು ಏನು ಪ್ರಸ್ತಾಪ ಮಾಡಿದರು ಅದು ಏನೇನು ಇದೆ ಅದರ ಬಗ್ಗೆ ನನಗೆ ಪತ್ರ ಬರೆದರೆ ನಾನು ಅದನ್ನು ಪರಿಶೀಲನೆ ಮಾಡುತ್ತೇನೆ. ಹಣ ಮತ್ತು ಆ ವಿಚಾರದಲ್ಲಿ ತಪ್ಪಿತಸ್ಥರು ಕಂಡುಬಂದರೆ ಅವರಿಗೆ ಶಿಕ್ಷೆಯಾಗುತ್ತದೆ. ಈಗ ಇಲ್ಲೂ ಕೂಡ ಕಾರ್ಯಕಲಾಪ ಇಂಜಿನಿಯರ್‌ಗಳು ಮಾಡಿರುವುದು ಇದೆ, ಮತ್ತು ಸೂಪರಿಂಟೆಂಡೆಂಟ್ ಇಂಜಿನಿಯರ್ ಕೂಡ ಅದನ್ನು ನೋಡಬೇಕಾಗುತ್ತದೆ. ಇದು ಏಕೆ ಹೀಗೆ ಆಯಿತು ಏನು ಆಯಿತು ಎಂದು ನಾನು ಈಗಾಗಲೇ ನಮ್ಮ ಅಧಿಕಾರಿಗಳ ಜೊತೆ ಪ್ರಸ್ತಾಪ ಮಾಡುತ್ತಿದ್ದೇನೆ. ಅವರು ಕೂಡ ಇದರ ಬಗ್ಗೆ ಗಮನ ಹರಿಸಿದ್ದಾರೆ. We will take action also.

ಶ್ರೀ ಸಿ. ಬೈರೇಗೌಡ:- ಇದಕ್ಕೆ ಒಂದು ಸದನದ ಸಮಿತಿಯ ವರದಿಯನ್ನು ಒಪ್ಪಿಸಬೇಕಾಗಿದೆ.

ಶ್ರೀ ಶಿವಾನಂದ ಎಚ್. ಕೌಜಲಗಿ:- ಇದರಲ್ಲಿ ಕಾರ್ಯಕಾರಿ ಅಭಿಯಂತರರ ತಪ್ಪು ಇಲ್ಲ. ಕಾರ್ಯಕಾರಿ ಅಭಿಯಂತರು ಏನು ತಪ್ಪು ಮಾಡಿಲ್ಲ. ಇದಕ್ಕೆ ನಾವು ಹೇಳುತ್ತೇವೆ..

(ಗೊಂದಲ)

ಅಧ್ಯಕ್ಷರು:- ಕೌಜಲಗಿಯವರೇ ತಾವು ಕುಳಿತುಕೊಳ್ಳಬೇಕು. ನೀವು ಏನು ಮಾತನಾಡುತ್ತಿದ್ದೀರಿ ಅದು ರೆಕಾರ್ಡ್‌ಗೆ ಹೋಗಬಾರದು ಎಂದು ಹೇಳಬೇಕಾಗುತ್ತದೆ.

(ಗೊಂದಲ)

Sri. Shivananda H. Koujalagi:- The Chief Minister is not at fault. The fault is with the Executive Engineer. ಅದನ್ನು ನೋಡಿಕೊಳ್ಳಬೇಕು. ಅದೇ ಮುಖ್ಯ ಇರುವುದು.

ಶ್ರೀ ಕೆ.ಹೆಚ್. ರಂಗನಾಥ್:- ಏನು ಇದೆ, ಅದನ್ನು ಇಟ್ಟಿದ್ದೇನೆ. ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇನೆ. ಯಾರದು ಈಗ ತಪ್ಪಾಗಿದೆ, ಉಪ್ಪು ತಿಂದವರು ನೀರು ಕುಡಿಯಬೇಕಾಗುತ್ತದೆ? ಬೇರೆಯವರು ಏತಕ್ಕೆ ಕುಡಿಯಬೇಕು?

ದ.ಅ. ॥ ವರದಿಯನ್ನೊಪ್ಪಿಸುವುದು.

ಶ್ರೀ ಎ. ನಾಗರಾಜ್:- ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿದ್ಯುತ್ ಮಂಡಳಿ ಹಾಗೂ ಕರ್ನಾಟಕ ವಿದ್ಯುತ್ ನಿಗಮದ ಕಾರ್ಯನಿರ್ವಹಣೆ ಮತ್ತು ಆಡಳಿತ ದಕ್ಷತೆಯನ್ನು ಉತ್ತಮ ಪಡಿಸುವ ಸಲುವಾಗಿ ಶಿಫಾರಸ್ಸುಗಳನ್ನು ನೀಡುವ ರಚಿಸಲಾಗಿದ್ದ ಜಂಟಿ ಸದನದ ಸಮಿತಿಯ ಮಧ್ಯಂತರ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು:- ವರದಿಯನ್ನು ಮಂಡಿಸಲಾಗಿದೆ.

ಶ್ರೀ ಸಿ. ಬೈರೇಗೌಡ:- ಈಗ ಒಪ್ಪಿಸಿರತಕ್ಕಂಥ ವರದಿ ರಾಜ್ಯದ ರೈತರ ದೃಷ್ಟಿಯಿಂದ ಬಹಳ ಮಹತ್ತರವಾದ ವರದಿಯಾಗುತ್ತದೆ. ಆದರಿಂದ ನಾನು ಸರ್ಕಾರವನ್ನು ಇದು ಇವತ್ತಿನಿಂದಲೇ ನಾವು ಏನು ಸಲಹೆ ಮಾಡಿದ್ದೇವೆ. ಅದನ್ನು ದಯವಿಟ್ಟು ಜಾರಿಗೆ ಕೊಡಬೇಕು ಎಂದು ಹೇಳಿ ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಕಾರಣವೇನೆಂದರೆ ಈ ವಿದ್ಯುತ್‌ನ ಸರಬರಾಜು ಪಂಪುಸೆಟ್ಟುಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಸದನದಲ್ಲಿ. ಚರ್ಚೆಯ ಆಧಾರದ ಮೇಲೆ ಇವತ್ತಿನ ದಿವಸ ಸದನದ ಸಮಿತಿಯನ್ನು ರಚನೆ ಮಾಡಿದ್ದು. ಆ ಸದನದ ಸಮಿತಿ ಇವತ್ತಿನ ದಿವಸ ವರದಿಯನ್ನು ಕೊಟ್ಟಿದೆ. ಇದು ಒಂದು ನಿಮಿಷ ನಿಧಾನವಾದರೂ ಸಹಾ ಇಡೀ ರಾಜ್ಯದಲ್ಲಿ ರೈತರಿಗೆ ಭಾರೀ ಅನಾಹುತವಾಗುತ್ತದೆ. ತಿಂಗಳಾನುಗಟ್ಟಲೆ ರೈತರು ಪಂಪುಸೆಟ್ಟನ್ನು ಚಾಲು ಮಾಡದೇ ಇರತಕ್ಕಂಥ ಪರಿಸ್ಥಿತಿ ಇದೆ. ಕೋಟ್ಯಾಂತರ ರೂಪಾಯಿಗಳ ಬೆಳೆ ಹಾಳಾಗಿದೆ. ಆದ್ದರಿಂದ ಇವತ್ತಿನಿಂದಲೇ ಈ ವರದಿಯನ್ನು ಜಾರಿಗೆ ಕೊಡಬೇಕು ಎಂದು ಹೇಳಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸುತ್ತೇನೆ. ಸರ್ಕಾರದವರು ಯಾರಾದರೂ ಇದ್ದರೆ ದಯವಿಟ್ಟು ಇದರ ಬಗ್ಗೆ ಹೇಳಬೇಕು. ಇದು ಬಹಳ ಸಿಂಪಲ್ ಆಗಿದೆ. ಏನೂ ದೊಡ್ಡದು ಇಲ್ಲ. ಈ ಹೈ ಟೆನ್ಷನ್ ಇರತಕ್ಕಂಥವರಿಗೆ ಶೇಕಡ 5 ರಷ್ಟು ಪವರನ್ನು ಕಡಿತ ಮಾಡತಕ್ಕಂಥದ್ದು ಮತ್ತು ನಗರ ಮತ್ತು ಪಟ್ಟಣ ಪ್ರದೇಶದಲ್ಲಿ ಈಗ ಇರತಕ್ಕಂಥ ಒಂದು ವ್ಯತ್ಯಯ ಯಾವ ತರಹ ಇದೆ ಎಂದರೆ ಸರಬರಾಜು ಎಂದರೆ ಬೆಂಗಳೂರು ನಗರದಲ್ಲಿ ಕೇವಲ 45 ನಿಮಿಷ ಮಾತ್ರ ಪವರ್ ಷಟ್ ಡೌನ್ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ 6 ರಿಂದ 12 ಗಂಟೆಯಾಗುತ್ತಿದೆ. ಈ ಅನ್ಯಾಯವನ್ನು ಸರಿದೂಗಿಸಿ ಗ್ರಾಮಾಂತರ ಮತ್ತು ನಗರ ಪ್ರದೇಶದಲ್ಲಿ ಸಮಾನವಾಗಿರುವ ಪವರ್ ಷಟ್ ಡೌನನ್ನು ಆಳವಡಿಸಬೇಕು

ಇಷ್ಟೆ ವರದಿಯಲ್ಲಿರತಕ್ಕಂಥದು. ತಾವು ಸರ್ಕಾರಕ್ಕೆ ಕೇಳಬೇಕು. ಇದನ್ನು ತಕ್ಷಣ ಜಾರಿ ಕೊಡಬೇಕು ಎಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಇದನ್ನು ಜಾರಿ ಕೊಡದಿದ್ದರೆ ರೈತರಿಗೆ ತೊಂದರೆಯಾಗುತ್ತದೆ, ಅನ್ಯಾಯವಾಗುತ್ತದೆ. ಕಳೆದ ಮೂರು ನಾಲ್ಕು ತಿಂಗಳಿಂದ ಅನ್ಯಾಯವಾಗಿದೆ, ಈ ಅನ್ಯಾಯವನ್ನು ಇವತ್ತಿಂದಲಾದರೂ ಸರಿದೂಗಿಸಬೇಕು ಎಂದು ನಾನು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ:- ಇದು ಇಂಟರಿಮ್ ರಿಪೋರ್ಟ್ ಇದೆ. ಅದನ್ನು ಅವರು ಓದಿ ಹೇಳಬೇಕು. ಮಾನ್ಯ ಬೈರೇಗೌಡರಿಗೆ ಮಾಹಿತಿ ಗೊತ್ತಿದೆ. ಈ ಸಮಿತಿಯ ಸದಸ್ಯರು ಅವರು. ಹಾಗಾಗಿ ಅವರು ಹೇಳಿದರು, ನಾನೂ ಅದನ್ನು ಸಪೋರ್ಟ್ ಮಾಡುತ್ತೇನೆ, ಏಕೆಂದರೆ ರೈತರು ಬಹಳ ಕಷ್ಟದಲ್ಲಿದ್ದಾರೆ. ಹೈ ಟೆನ್ಷನ್ ಮೇಲೆ 5 ಪರ್‌ಸೆಂಟ್ ಪುನಃ ಪವರ್ ಕಟ್ ರೆಕಮೆಂಡ್ ಮಾಡಿದ್ದಾರೆ. ನಾನು ಸಂಕ್ಷಿಪ್ತದಲ್ಲಿ ನೋಡಿದ್ದೇನೆ. ಮತ್ತು ಷಟ್ ಡೌನ್ ಏನು ಮಾಡುತ್ತಾರೆ, ಆದರಿಂದ ಪಟ್ಟಣದಲ್ಲಿ ಜನರಿಗೆ ಅಷ್ಟು ಕಷ್ಟವಿಲ್ಲ. ಹಳ್ಳಿಯಲ್ಲಿ ಆರು ಗಂಟೆ, ಹನ್ನೊಂದು ಗಂಟೆ ದಿವಸ ಕಟ್ ನಡೆಯುತ್ತಿರುತ್ತದೆ. ಹಾಗಾಗಿ ಪಟ್ಟಣದಲ್ಲಿ ಮತ್ತು ಹಳ್ಳಿಯಲ್ಲಿ ಸಮಾನ್ಯವಾಗಿ ನಡೆಯಬೇಕು. ಇಲ್ಲಿ ಎಷ್ಟು ಮಾಡುತ್ತೀರಿ, ಅಷ್ಟೇ ಹಳ್ಳಿಯಲ್ಲಿ ಮಾಡಬೇಕು ಎಂದು ಏನು